ಮೇ. 12ರಂದು ಪಟ್ಟಣದ ಹನುಮಂತ ದೇವರ ಓಕುಳಿ

ಯರಗಟ್ಟಿ: ಪಟ್ಟಣದಲ್ಲಿ ಸತತ ಎರಡು ವರ್ಷ ಬರಗಾಲ ಆವರಿಸಿರುವ ಹಿನ್ನೆಲೆಯಲ್ಲಿ ಕಂಗೆಟ್ಟಿರುವ ರೈತರು ಮೇ 12ರಂದು ಪಟ್ಟಣದ ಹನುಮಂತ ದೇವರ ಓಕುಳಿ ಆಚರಿಸಲು ತೀರ್ಮಾನಸಿದ್ದಾರೆ. ಪ್ರತಿ ವರ್ಷ ಕೊಪ್ಪರಗಿಯಲ್ಲಿ ನೀರು ತುಂಬಿ ಓಕುಳಿ ಆಡುತ್ತಿದ್ದರು. 25 ವರ್ಷಗಳ ಹಿಂದೆ ಓಕುಳಿ ಹೊಂಡವನ್ನು ಮುಚ್ಚಿ ವೆಂಕಟೇಶ್ವರ ದೇವಸ್ಥಾನದ ಸಭಾಭವನದಲ್ಲಿ ನರ್ಮಿಸಲಾಗಿತ್ತು. ಆದರೆ ಈ ಬಾರಿ ಮಳೆ ಆಗದ ಕಾರಣ ಪಟ್ಟಣದ ಗುರುಹಿರಿಯರು ಮಳೆಗಾಗಿ ಪ್ರಾರ್ಥಿಸಿ ಓಕುಳಿ ಹೊಂಡವನ್ನು ತಿರ್ಮಾನ ಮಾಡಿ ಅದರಲ್ಲಿ ನೀರು ತುಂಬಿ ಆಡಲಾಗುವುದು. ಪಟ್ಟಣದ ಎಲ್ಲ ಸಮಾಜದವರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕು ಎಂದು ದೇವಸ್ಥಾನದ ಹಿರಿಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈ ವೇಳೆ ಎನ್. ಕೆ. ಹುಚ್ಚರಡ್ಡಿ, ಎಚ್. ಎಲ್. ವಜ್ರಮಟ್ಟಿ, ಗುಂಡುಗೌಡ ಮಿಕಲಿ, ರಮೇಶ ಪಾಟೀಲ, ಗಿರೀಶ ಪಾಟೀಲ, ಹನಮಂತ ವಜ್ರಮಟ್ಟಿ, ಹನಮಂತ ಹಳ್ಳಿಂಡಿ, ಆಕಾಶ ಚಪರದ, ರವಿ ದೇವರಡ್ಡಿ, ವಿಠ್ಠಲ ಶಿವಾಪೂರ, ಅರುಣ ಗಂಗರಡ್ಡಿ, ಪಾಂಡುಗೌಡ ಪಾಟೀಲ, ಗೋವಿಂದ ದೇವರಡ್ಡಿ, ಶ್ರೀನಿವಾಸ ವಜ್ರಮಟ್ಟಿ, ಎಚ್. ಎಸ್. ದೇವರಡ್ಡಿ ಸೇರಿದಂತೆ ಅನೇಕರು ಇದ್ದರು.

ಶ್ರೀ ವೇಮನ್ ಸೊಸಾಯಿಟಿಗೆ 2.20 ಕೋಟಿ ರೂ ಲಾಭ–ಸೋನವಾಲಕರ

ಮೂಡಲಗಿ: ಪಟ್ಟಣದ ಪ್ರತಿಷ್ಠಿತ ಸಹಕಾರಿ ಸಂಘಗಳಲ್ಲಿ ಒಂದಾದ ಶ್ರೀ ವೇಮನ್ ಕೋ–ಆಪ್ ಕ್ರೆಡಿಟ್ ಸೊಸಾಯಿಟಿಯು ಆಡಳಿತ ಮಂಡಳಿಯ ನಿಸ್ವಾರ್ಥ ಸೇವೆ ಮತ್ತು ಸಿಬ್ಬಂದಿ ವರ್ಗದವರ ಸತತ ಪ್ರಯತ್ನದಿಂದ ಹಾಗೂ ಗ್ರಾಹಕರು ಸಕಾಲಕ್ಕೆ ಸಾಲ ಮರುಪಾವತಿ ಮಾಡಿದರಿಂದ ಸೊಸಾಯಿಟಿಯು ವರ್ಷದಿಂದ ವರ್ಷಕ್ಕೆ ಪ್ರಗತಿ ಹೊಂದಿ ಕಳೆದ 2024 ಆರ್ಥಿಕ ವರ್ಷದ ಮಾರ್ಚ ಅಂತ್ಯಕ್ಕೆ 2.20 ಕೋಟಿ ರೂ ಲಾಭಗಳಿಸಿದೆ ಎಂದು ಸೊಸಾಯಿಟಿಯ ಅಧ್ಯಕ್ಷ ಸಂತೋಷ ಕೃ.ಸೋನವಾಲಕರ ಅವರು ತಿಳಿಸಿದರು.

ಸೋಮವಾರದಂದು ಮೂಡಲಗಿ ಪಟ್ಟಣದ ವೇಮನ್ ಸೊಸಾಯಿಟಿ ಸಭಾ ಭವನದಲ್ಲಿ ಸೊಸಾಯಿಟಿಯ ಪ್ರಗತಿ ಕುರಿತು ಕರೆದಿದ್ದ ಸಭೆಯಲ್ಲಿ ಮಾತನಾಡಿದ ಅವರು, ಸೊಸಾಯಿಟಿಯು ಈಗಾಗಲೇ ಹುಲಕುಂದ, ರಾಮದುರ್ಗ, ಹೊಸಕೋಟಿ, ಯಾದವಾಡ, ಮೂಧೋಳ, ಜಮಖಂಡಿ, ಯರಗಟ್ಟಿ ಮತ್ತು ಸವದತ್ತಿ ಶಾಖೆಗಳನ್ನು ಪ್ರಗತಿಯಲ್ಲಿದ್ದು, ಇನ್ನೂ ಎರಡು ಶಾಖೆಗಳನ್ನು ಪ್ರಾರಂಭಿಸುವದಾಗಿ ಎಂದ ಅವರು ಸೊಸಾಯಿಟಿಯ ಶೇರುದಾರರಿಗೆ ಶೇ.12 ರಷ್ಟು ಲಾಭಾಂಶ ವಿತರಸಲಾಗಿದೆ ಎಂದರು. .

ಸೊಸಾಯಿಟಿಯ ಉಪಾಧ್ಯಕ್ಷ ಹಣಮಂತ ಪ್ಯಾಟಿಗೌಡ್ರ ಮಾತನಾಡಿ, ಸೊಸಾಯಿಟಿಯು ಕಳೆದ ಮಾರ್ಚ ಅಂತ್ಯಕ್ಕೆ 3664 ಶೇರುದಾರಿಂದ 3.22 ಕೋಟಿ ರೂ ಶೇರು, 8.88 ಕೋಟಿ ರೂ ನಧಿಗಳನ್ನು ಹೊಂದಿ, 144.91 ಕೋಟಿ ಠೇವು ಸಂಗ್ರಹಿಸಿ, ಶೇರುದಾರರಿಗೆ ವಿವಿಧ ತೇರನಾದ 91.24 ಕೋಟಿ ರೂ ಸಾಲ ನೀಡಿ, ಗ್ರಾಹಕ ಭದ್ರತೆಗಾಗಿ ವಿವಿಧ ಬ್ಯಾಂಕುಗಳಲ್ಲಿ 55.55 ಕೋಟಿ ರೂ ಗುಂತಾವಣಿಗಳನ್ನು ಮಾಡಲ್ಲಾಗಿದೆ ಎಂದ ಅವರು ಒಟ್ಟು 165.23 ಕೋಟಿ ರೂ. ದುಡಿಯುವ ಬಂಡವಾಳದೊಂದಿಗೆ ಒಟ್ಟು 660.17 ಕೋಟಿ ರೂ ವಾರ್ಷಿಕ ವಹಿವಾಟು ನಡೆಸಿ 2.20 ಕೋಟಿ ರೂ ನವ್ವಳ ಲಾಭ ಹೊಂದಿ, ಅಡಿಟ್ ವರ್ಗಿಕರಣದಲ್ಲಿ 'ಅ' ಶ್ರೇಣಿಯನ್ನು ಪಡೆದು ಕೊಂಡಿದೆ ಎಂದರು.

ಸಭೆಯಲ್ಲಿ ಸೊಸಾಯಿಟಿಯ ನರ್ದೇಶಕರಾದ ವಿಜಯಕುಮಾರ ಸೋನವಾಲಕರ, ಸಿದ್ದಪ್ಪ ಕ.ಪೂಜೇರಿ, ಸಚೀನ ಸೋನವಾಲಕರ. ಪಾಂಡಪ್ಪ ಸೋನವಾಲಕರ, ಯಮನಪ್ಪ ಮಂಟನವರ, ಹಣಮಂತ ದಂಡಪ್ಪನವರ, ತಮ್ಮಣ್ಣಾ ಝಂಡೇಕುರಬರ, ಲತಾ ವೆಂ.ಸತರಡ್ಡಿ ಲಕ್ಷ್ಮೀಬಾಯಿ ವೆಂ.ಸಂತಿ, ರಾಮಪ್ಪ ಹಾದಿಮನ, ಪ್ರಧಾನ ವ್ಯವಸ್ಥಾಪಕ ಪರಶುರಾಮ ಕುಟರಟ್ಟಿ ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಮೇ.10 ರಿಂದ ಶಂಕರಾಚಾರ್ಯರ ಜಾತ್ರಾ ಮಹೋತ್ಸವ ಮತ್ತು ಅಕ್ಷರಭ್ಯಾಸ ಕಾರ್ಯಕ್ರಮ

ಕೊಪ್ಪಳ : ಪಕ್ಕದ ಸುಕ್ಷೇತ್ರ ಭಾಗ್ಯನಗರದ ಶ್ರೀ ಶಾರದಾ ಪೀಠಜಗದ್ಗುರು ಶಂಕರಾಚಾರ್ಯರ ಮಠದಜಾತ್ರಾ ಮಹೋತ್ಸವವನ್ನುಇದೇ ತಿಂಗಳ 10 ರಿಂದ 12 ವರೆಗೆ ವಿಜೃಂಭಣೆಯಾಗಿಜರುಗಿಸಲಾಗುವುದು. ಇದೇ ಸಂದರ್ಭದಲ್ಲಿ ವಿವಿಧಧಾರ್ಮಿಕ ಕಾರ್ಯಕ್ರಮಗಳು ಸೇರಿದಂತೆಅಕ್ಷರಭ್ಯಾಸಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ದಿ.10ರ ಶುಕ್ರವಾರದಂದು ಬ್ರಾಹ್ಮಿ ಮುಹೂರ್ತದಲ್ಲಿಗುರುದೇವತಾ ಮೂರ್ತಿಗಳಿಗೆ ವಿಶೇಷ ಪಂಚಾಮೃತಅಭಿಷೇಕ, ಅಲಂಕಾರ ಪೂಜೆ ನಂತರಧ್ವಜಾರೋಹಣ ನೆರವೇರಿಸಲಾಗುವುದು.ನಂತರ ಶ್ರೀ ಶಾರದಾ ಮಾತೆಗೆ ಹಾಗೂ ಮುತ್ತೈದೆಯರಿಗೆ ಉಡಿ ತುಂಬುವಕಾರ್ಯಕ್ರಮ ಮತ್ತು ಮಕ್ಕಳಿಗೆ ಅಕ್ಷರಭ್ಯಾಸಕಾರ್ಯಕ್ರಮವನ್ನು ನಡೆಸಲಾಗುವುದು.

ದಿ.11ರ ಶನವಾರದಂದು ವಿವಿಧಧಾರ್ಮಿಕ ಕಾರ್ಯಕ್ರಮಗಳೊಂದಿಗೆ ಬೆಳಿಗ್ಗೆ 7 ಗಂಟೆಗೆ ಭಾಗ್ಯನಗರದ ಮಹಿಳೆಯರು ಹಾಗೂ ಶ್ರೀ ಶಾರದಾಂಬಾ ಶಾಲೆಯ ವಿದ್ಯಾರ್ಥಿಗಳಿಂದ ಸಾಮೂಹಿಕ ಶ್ರೀರುದ್ರ ಪಠಣದೊಂದಿಗೆ ಶಿವಸಾಲಿಗ್ರಾಮಕ್ಕೆ ರುದ್ರಾಭಿಷೇಕ ನಡೆಸಲಾಗುವುದು.ನಂತರಸಂಜೆ 5 ಗಂಟೆಗೆ ಲಘು (ಉಚ್ಚಾಯ) ರಥೋತ್ಸವವನ್ನು ಹಮ್ಮಿಕೊಳ್ಳಲಾಗಿದೆ. ದಿ.12 ರವಿವಾರ ಬೆಳಿಗ್ಗೆ 7 ಗಂಟೆಗೆ ಭಾಗ್ಯನಗರದ ಮಹಿಳೆಯರು ಹಾಗೂ ಶ್ರೀ ಶಾರದಾಂಬಾ ಶಾಲೆಯ ವಿದ್ಯಾರ್ಥಿಗಳಿಂದ ಸಾಮೂಹಿಕ ಶ್ರೀ ಲಲಿತಾ ಸಹಸ್ರನಾಮ ಪಾರಾಯಣ ಸೇರಿದಂತೆ ವಿವಿಧಧಾರ್ಮಿಕ ಕಾರ್ಯಕ್ರಮಗಳು ನಡೆಯಲಿದ್ದು, ನಂತರ 8.30ಕ್ಕೆ ಮಡಿತೇರು ಎಳೆಯಲಾಗುವುದು. ಇದಲ್ಲದೆ ವಿವಿಧಧಾರ್ಮಿಕ ಚಿಂತನೆಗಳು ಸೇರಿದಂತೆ ವಿವಿಧ ಕಾರ್ಯಕ್ರಮಗಳು ನಂತರ ಮಹಾಪ್ರಸಾದ ಜರುಗುವುದು. ನಂತರ ಸಂಜೆ 5.30ಕ್ಕೆ ಜಗದ್ಗುರು ಶ್ರೀ ಶಂಕರಾಚಾರ್ಯರ ಮಹಾರಥೋತ್ಸವ ಜರುಗುವುದು.

ಹಾಗೂ ಸಂಜೆ ವಿವಿಧ ಸಾಂಸ್ಕೃತಿಕ,ಧಾರ್ಮಿಕ ಕಾರ್ಯಕ್ರಮಗಳು ಜರುಗುವುವು. ಎಲ್ಲಾ ಕಾರ್ಯಕ್ರಮಗಳು ಶ್ರೀ ಶಿವರಾಮಕೃಷ್ಣಾನಂದ ಭಾರತಿ ಸ್ವಾಮಿಇವರ ನೇತೃತ್ವದಲ್ಲಿ ನಡೆಯುವುದುಎಂದು ಶ್ರೀ ಶಾರದಾ ಪೀಠ, ಜಗದ್ಗುರು ಶ್ರೀ ಶಂಕರಾಚಾರ್ಯರ ಮಠ ಪ್ರಕಟಣೆಯಲ್ಲಿ ತಿಳಿಸಿ ಸರ್ವರು ಈ ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಂಡುಜಗದ್ಗುರು ಶಂಕರಾಚಾರ್ಯರ ಕೃಪೆಗೆ ಪಾತ್ರರಾಗಲುಕೋರಲಾಗಿದೆ.

ಮೊದಲ ಬಾರಿ ಮತದಾನ ಸಂತಸ ಹಂಚಿಕೊಂಡ ಯುವ ಮತದಾರರು

ಯರಗಟ್ಟಿ : ಮತದಾನ ಮಾಡುವುದು ಪ್ರತಿಯೊಬ್ಬರ ಕರ್ತವ್ಯ. ಜೀವನದಲ್ಲಿ ಮೊದಲ ಬಾರಿಗೆ ಮತ ಚಲಾಯಿಸಲು ಎಲ್ಲರೂ ಖುಷಿ ಪಡುತ್ತಾರೆ. ಹಾಗೆಯೇ ಇಂದು ನಡೆಯುತ್ತಿರುವ ಲೋಕಸಭಾ ಚುನಾವಣೆ ನಮಿತ್ತ ಹಲವು ಯುವ ಮತದಾರರು ಮೊದಲ ಬಾರಿಗೆ ಮತದಾನ ಮಾಡುವ ಮೂಲಕ ಸಂತಸ ಹಂಚಿಕೊಂಡರು. ಸಮೀಪದ ಸೊಪ್ಪಡ್ಲ ಗ್ರಾಮದಲ್ಲಿ ಮೊದಲ ಬಾರಿ ಮತದಾನ ಮಾಡಿ ಮಾತನಾಡಿದ ಅಪೇಕ್ಷಾ ಗೌಡರ ಬಹಳ ದಿನಗಳಿಂದ ನಾನು ವೋಟ್ ಮಾಡಲು ಕಾಯುತ್ತಿದ್ದೆ.

ಇದೀಗ ಸಮಯ ಕೂಡಿ ಬಂದಿತು. ಮೊದಲ ಬಾರಿ ಮತದಾನ ಮಾಡಿದ್ದು ಹಾಗೆಯೇ ಮತದಾನದ ಪ್ರಕ್ರಿಯೆ ಕಂಡು ಖುಷಿ ಆಯಿತು. ಆರಂಭದಲ್ಲಿ ನನ್ನ ಹೆಸರು ಮತದಾರ ಪಟ್ಟಿಯಲ್ಲಿ ಕಾಣಿಸಲಿಲ್ಲ. ಆ ಬಳಿಕ ಅಧಿಕಾರಿಗಳು ಸಮ ಸ್ಯೆಯನ್ನು ಬಗೆಹರಿಸಿ ಮತದಾನಕ್ಕೆ ಅವಕಾಶ ಮಾಡಿಕೊಟ್ಟರು.

ನನ್ನ ಹೆಸರು ಮತದಾರರ ಪಟ್ಟಿಯಲ್ಲಿ ಇರುವುದು ಕೂಡ ಖುಷಿ ತಂದಿದೆ ಎಂದರು.

ಗದಗ ಬೆಟಗೇರಿ ಅವಳಿ ನಗರದ ಮತದಾರ ಬಾಂಧವರಿಂದ ಅತ್ಯುತ್ಸಾಹದಿಂದ ಮತ ಚಲಾವಣೆ

ಗದಗ 7:–ಲೋಕಸಭೆ ಚುನಾವಣೆ 2024ರ 2ನೇ ಹಂತದ ಮತದಾನವಾದ ಇಂದು ಮೇ 7 ರ ಮಂಗಳವಾರ ದಂದು ಕರ್ನಾಟಕದ ಹಲವಾರು ಕ್ಷೇತ್ರಗಳಲ್ಲಿ 2 ನೇ ಹಂತದ ಮತದಾನ ಜರುಗಿತು. ಬೆಳಗ್ಗೆ 7 ಗಂಟೆಗೆ ಆರಂಭವಾದ ಮತದಾನ ಬಿರುಬಿಸಿಲು ಇರುವುದರಿಂದ ಬೆಳಗ್ಗೆಯೇ ಮತದಾರರು ತಮ್ಮ ಹಕ್ಕು ಚಲಾಯಿಸಲು ಉತ್ಸುಕರಾಗಿದ್ದರು.ಅದರಂತೆ ಹಾವೇರಿ ಗದಗ ಲೋಕಸಭಾ ಕ್ಷೇತ್ರದ ಗದಗ ಬೆಟಗೇರಿ ಅವಳಿ ನಗರಸಭೆಯ 23 ನೇ ವಾರ್ಡಿನ 84 ನೇ ಮತಗಟ್ಟಿಯಲ್ಲಿ ಸೌಜನ್ಯತಾ ಸಮಗ್ರ ನಾಗರಿಕ ಹಿತರಕ್ಷಣಾ ಸಮಿತಿಯ ಅಧ್ಯಕ್ಷರಾದ ಶ್ರೀಮತಿ ಸಹನಾ ರಾಘವೇಂದ್ರ ಪಾಲನಕರ ಹಾಗೂ ವಕೀಲರು ಮತ್ತು ಸಾಮಾಜಿಕ ಕಾರ್ಯಕರ್ತರಾದ ರಾಘವೇಂದ್ರ ಪಾಲನಕರ ರವರು ತಮ್ಮ ಕುಟುಂಬ ಪರಿವಾರದೊಂದಿಗೆ ತಮ್ಮ ಅಮೂಲ್ಯವಾದ ಮತ ಚಲಾಯಿಸಿದರು.ಅಂತೆಯೇ ಮತದಾರ ಬಾಂಧವರಿಗೆ ಮತದಾನದ ಮಹತ್ವದ ಕುರಿತು ಮಾಹಿತಿಯನ್ನು ಹಂಚಿಕೊಂಡರು.

ಗದಗ : ನಗರದ ಶ್ರೀ ಗಂಜಿ ಬಸವೇಶ್ವರ ಜಾತ್ರಾಮಹೋತ್ಸವ ಹಿನ್ನೆಲೆಯಲ್ಲಿ ಏಶಿಯಾ ಇಂಟರ್‌ನ್ಯಾಶನಲ್ ಕಲ್ಚರ್ ಅಕಾಡೆಮಿ ಗೌರವ ಡಾಕ್ಟರೇಟ ಪ್ರಶಸ್ತಿ ಪಡೆದಿರುವ ನವ ಕರ್ನಾಟಕ ಜನಪರ ಅಭಿವೃದ್ಧಿ ವೇದಿಕೆಯ ಜಿಲ್ಲಾ ಅಧ್ಯಕ್ಷರಾದ ಡಾ. ಶಿವಕುಮಾರ ರಾಮನಕೊಪ್ಪ, ರೈತ ಘಟಕದ ರಾಜ್ಯಾಧ್ಯಕ್ಷರಾದ ಡಾ.ಶಿವಾನಂದ ಹಿರೇಮಠ ಹಾಗೂ ಸಾಮಾಜಿಕ ಕಾರ್ಯಕರ್ತರಾದ ಡಾ. ಎಸ.ಎಸ್.ರಡ್ಡೇರ ಅವರನ್ನ ಶ್ರೀ ಗಂಜೀ ಬಸವೇಶ್ವರ ದೇವಸ್ಥಾನದ ಅಧ್ಯಕ್ಷರಾದ ನಂಗಪ್ಪ ಪಡಗದ ಅವರ ನೇತೃತ್ವದಲ್ಲಿ ಸನ್ಮಾನಸಿ, ಗೌರವಿಸಿದರು. ಈ ಸಂದರ್ಭದಲ್ಲಿ ಶ್ರೀ ವಿರೇಶ್ವರ ಪುಣ್ಯಾಶ್ರಮದ ಕಲ್ಲಯ್ಯಜ್ಜನವರು, ಜಾತ್ರಾ ಸಮಿತಿ ಅಧ್ಯಕ್ಷರಾದ ಪರಪ್ಪ ಕಮತರ, ಉಪಾಧ್ಯಕ್ಷರಾದ ಶಿವಪ್ಪ ಮುಳ್ಳಾಳ, ಕೋಶಾದ್ಯಕ್ಷರಾದ ಸತೀಶ ಗಿಡ್ಡಹನುಮಣ್ಣವರ, ಕಾರ್ಯದರ್ಶಿ ರಾಜು ಕವಳಿಕಾಯಿ, ಸಹ ಕಾರ್ಯದರ್ಶಿ ನಾಗಪ್ಪ ಹುಂಬಿ ಹಾಜರಿದ್ದರು.

ಮತದಾನ ಮಾಡಿದ ಮಾಜಿ ಸಚಿವ ಬಂಡೆಪ್ಪ ಖಾಶೆಂಪುರ್

ಬೀದರ್ (ಮೇ.07): ಮಾಜಿ ಸಚಿವರು, ಜೆಡಿಎಸ್ ಪಕ್ಷದ ಹಿರಿಯ ನಾಯಕರಾಗಿರುವ ಬಂಡೆಪ್ಪ ಖಾಶೆಂಪುರ್ ರವರು ಬೀದರ್ ನಗರದ ಒಲ್ಡ್ ಸಿಟಿಯ (ಮನಯಾರ್ ತಾಲಿಮ್) ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ (ಜಿಲ್ಲಾ ಸರ್ಕಾರಿ ಆಯುರ್ವೇದ ಮತ್ತು ಯುನಾನಿ ಆಸ್ಪತ್ರೆ ಕಟ್ಟಡ) ಲ್ಲಿನ ಮತಗಟ್ಟೆ (ಬೂತ್ ನಂಬರ್:106) ಯಲ್ಲಿ ಮಂಗಳವಾರ ಬೆಳಿಗ್ಗೆ ಕುಟುಂಬಸ್ಥರೊಂದಿಗೆ ಮತದಾನ (ಮತ ಚಲಾವಣೆ) ಮಾಡಿದರು.ಈ ವೇಳೆ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮತದಾನ ಎಂಬುದು ಎಲ್ಲದಕ್ಕಿಂತ ದೊಡ್ಡ ಹಬ್ಬವಾಗಿದೆ. ಆಗಾಗಿ ಪ್ರತಿಯೊಬ್ಬರೂ ಕೂಡ ತಪ್ಪದೇ ಮತದಾನ ಮಾಡಬೇಕು ಎಂದು ಮನವಿ ಮಾಡಿದರು.

ಪೇನ್ ಡ್ರೈವ್ ಹಗರಣ ಕಾಂಗ್ರೆಸ್ ನವ್ರ ಇನ್ನೊಂದು ಮುಖವಾಗಿದೆ: ಪೇನ್ ಡ್ರೈವ್ ಹಗರಣವು ಕಾಂಗ್ರೆಸ್ ನವ್ರ ಇನ್ನೊಂದು ಮುಖವಾಗಿದೆ. ಈ ಹಗರಣದ ಮೂಲಕ ಅವರ ಇನ್ನೊಂದು ಮುಖ ಈಗ ಹೊರಗಡೆ ಬರುತ್ತಿದೆ. ಸಿಡಿ ವಿಚಾರದಲ್ಲಿ ಅವರು ಯಾವ ರೀತಿ ಳ್ಯಡ್ಯಂತ್ರ ಮಾಡಿದ್ದಾರೆ ಎಂಬುದು ಗೊತ್ತಾಗುತ್ತಿದೆ. ಆರೋಪಿ ತಪ್ಪು ಮಾಡಿದ್ರೆ ಕಾನೂನು ಪ್ರಕಾರ ಶಿಕ್ಷೆ ಆಗಲಿ ಎಂದು ನಾವು ಮೊದಲಿನಿಂದಲೂ ಹೇಳುತ್ತಿದ್ದೇವೆ.

ಆದರೇ ಕಾಂಗ್ರೆಸ್ ನವ್ರು ಚುನಾವಣೆ ನಮಿತ್ತವಾಗಿ ಳ್ಯಡ್ಯಂತ್ರ ಮಾಡಿದ್ದಾರೆ. ಈ ಳ್ಯಡ್ಯಂತ್ರದಲ್ಲಿ ಯಾವ ಮಹಾನ್ ನಾಯಕನ ಕೈವಾಡವಿದೆ. ಹೇಗೆಲ್ಲಾ ಳ್ಯಡ್ಯಂತ್ರ ನಡೆದಿದೆ ಎಂಬುದನ್ನು ನನ್ನೆ ವಕೀಲರು ಹೇಳಿದ್ದಾರೆ ಎಂದರು.

ಕಾಂಗ್ರೆಸ್ ನವ್ರು ಗಾಬರಿಗೊಂಡಿದ್ದಾರೆ:

ಕಾಂಗ್ರೆಸ್ ನವ್ರ ಗ್ಯಾರಂಟಿ ಎಲ್ಲಿಯೂ ವರ್ಕ್ ಆಗದೆ ಇರುವ ಕಾರಣದಿಂದ ಅವರು ಗಾಬರಿಗೊಂಡಿದ್ದಾರೆ. ದೇಶದ ಬಗ್ಗೆ ಜನರು ಚಿಂತನೆ ಮಾಡುತ್ತಿದ್ದಾರೆ. ಕರ್ನಾಟಕದಲ್ಲಿ ಒಂದೋ ಎರಡೋ ಕಾಂಗ್ರೆಸ್ ಬಂದ್ರು ಬಾಳ್ ದೊಡ್ ಮಾತಿದೆ. ದೇಶದ ಜನರ ಒಲವು ಎನ್‌ಡಿಎ ಪರವಾಗಿದೆ. ಎನ್‌ಡಿಎಗೆ ಒಳ್ಳೆಯ ರಿಸಲ್ಟ್ ಬರುತ್ತದೆ.ಕಾಂಗ್ರೆಸ್ ನವ್ರು ದೇವೇಗೌಡರ ಕುಟುಂಬದ ವಿರುದ್ಧ ದ್ವೇಷದ ರಾಜಕೀಯ ಮಾಡುತ್ತಿದ್ದಾರೆ. ನಾವು ಮಹಿಳೆಯರಿಗೆ, ತಾಯಂದಿರಿಗೆ ಗೌರವ ಕೊಟ್ಟಿದ್ದೇವೆ. ಆದರೆ ಕಾಂಗ್ರೆಸ್ ನವ್ರು ಈ ವಿಳಯದಲ್ಲಿ ಳ್ಯಡ್ಯಂತ್ರ ಮಾಡಿದ್ದಾರೆ ಎಂದು ಬಂಡೆಪ್ಪ ಖಾಶೆಂಪುರ್ ರವರು ಆರೋಪಿಸಿದರು.

ಪೇನ್ ಡ್ರೈವ್ ಪ್ರಕರಣವನ್ನು ಸಿಬಿಐಗೆ ಕೊಡ್ರಿ: ಪೆನ್ ಡ್ರೈವ್ ಪ್ರಕರಣವನ್ನು ಸಿಬಿಐಗೆ ತನಖೆಗೆ ವಹಿಸಲಿ. ಸಿಬಿಐಗೆ ಕೊಟ್ಟು ತನಖೆ ಮಾಡಿಸಲಿ. ವಕೀಲರು ಬಿಡುಗಡೆ ಮಾಡಿದ ದಾಖಲೆಗಳನ್ನು ಸಿಬಿಐಗೆ ಕೊಡಲಿ. ಈ ಕಾಂಗ್ರೆಸ್ ಸರ್ಕಾರವು ಮಹಾನ್ ನಾಯಕನನ್ನು ಅಷ್ಟೇ ಅಲ್ಲ, ಅವರಿಗೆ ಬೇಕಾದವರೆಲ್ಲರನ್ನೂ ರಕ್ಷಣೆ ಮಾಡುತ್ತಿದೆ.

ಪೇನ್ ಡ್ರೈವ್ ಹಂಚಿದವರಿಗೂ ಶಿಕ್ಷೆಯಾಗಲಿ:

ಪೆನ್ ಡ್ರೈವ್ ತಯಾರು ಮಾಡಿದವರು ಯಾರು, ಅವುಗಳನ್ನು ಹಂಚಿಕೊಂಡವರು ಯಾರು ಎಂಬುದರ ಮೇಲೆ ಕೂಡ ಸಿಬಿಐ ತನಖೆ ಆಗಲಿ. ಅವರಿಗೂ ಶಿಕ್ಷೆ ಆಗಬೇಕು. ಕಾಂಗ್ರೆಸ್ ನವ್ರು ಕರ್ನಾಟಕದಲ್ಲಿ ಹಣ ಬಲ, ಅಧಿಕಾರ ಬಲ, ತೋಳ್ ಬಲದೊಂದಿಗೆ ಚುನಾವಣೆ ಮಾಡುತ್ತಿದ್ದಾರೆ. ಆದರೆ ಅದ್ಯಾವುದು ನಡೆಯಲ್ಲ. ಈಗ ಏನಿದ್ದರೂ ದೇಶದಲ್ಲಿ, ರಾಜ್ಯದಲ್ಲಿ ಮೋದಿ ಹವಾ ಇದೆ ಎಂದು ಮಾಧ್ಯಮದವರ ಪ್ರಶ್ನೆಗಳಿಗೆ ಮಾಜಿ ಸಚಿವ ಬಂಡೆಪ್ಪ ಖಾಶೆಂಪುರ್ ರವರು ಉತ್ತರಿಸಿದರು. ಈ ಸಂದರ್ಭದಲ್ಲಿ ಬಂಡೆಪ್ಪ ಖಾಶೆಂಪುರ್ ರವರ ಪತ್ನಿ ನಳಿನ ಖಾಶೆಂಪುರ್, ಸಹೋದರ ರವಿ ಖಾಶೆಂಪುರ್ ಸೇರಿದಂತೆ ಅನೇಕರಿದ್ದರು.

ಪೇನ್ ಡ್ರೈವ್ ಹಂಚಿದವರಿಗೂ ಶಿಕ್ಷೆಯಾಗಲಿ:

ಪೆನ್ ಡ್ರೈವ್ ತಯಾರು ಮಾಡಿದವರು ಯಾರು, ಅವುಗಳನ್ನು ಹಂಚಿಕೊಂಡವರು ಯಾರು ಎಂಬುದರ ಮೇಲೆ ಕೂಡ ಸಿಬಿಐ ತನಖೆ ಆಗಲಿ. ಅವರಿಗೂ ಶಿಕ್ಷೆ ಆಗಬೇಕು. ಕಾಂಗ್ರೆಸ್ ನವ್ರು ಕರ್ನಾಟಕದಲ್ಲಿ ಹಣ ಬಲ, ಅಧಿಕಾರ ಬಲ, ತೋಳ್ ಬಲದೊಂದಿಗೆ ಚುನಾವಣೆ ಮಾಡುತ್ತಿದ್ದಾರೆ. ಆದರೆ ಅದ್ಯಾವುದು ನಡೆಯಲ್ಲ. ಈಗ ಏನಿದ್ದರೂ ದೇಶದಲ್ಲಿ, ರಾಜ್ಯದಲ್ಲಿ ಮೋದಿ ಹವಾ ಇದೆ ಎಂದು ಮಾಧ್ಯಮದವರ ಪ್ರಶ್ನೆಗಳಿಗೆ ಮಾಜಿ ಸಚಿವ ಬಂಡೆಪ್ಪ ಖಾಶೆಂಪುರ್ ರವರು ಉತ್ತರಿಸಿದರು. ಈ ಸಂದರ್ಭದಲ್ಲಿ ಬಂಡೆಪ್ಪ ಖಾಶೆಂಪುರ್ ರವರ ಪತ್ನಿ ನಳಿನ ಖಾಶೆಂಪುರ್, ಸಹೋದರ ರವಿ ಖಾಶೆಂಪುರ್ ಸೇರಿದಂತೆ ಅನೇಕರಿದ್ದರು.

ಗದಗ ಬೆಟಗೇರಿ ಅವಳಿ ನಗರದ ಮತದಾರ ಬಾಂಧವರಿಂದ ಅತ್ಯುತ್ಸಾಹದಿಂದ ಮತ ಚಲಾವಣೆ

ಗದಗ 7:–ಲೋಕಸಭೆ ಚುನಾವಣೆ 2024ರ 2ನೇ ಹಂತದ ಮತದಾನವಾದ ಇಂದು ಮೇ 7 ರ ಮಂಗಳವಾರ ದಂದು ಕರ್ನಾಟಕದ ಹಲವಾರು ಕ್ಷೇತ್ರಗಳಲ್ಲಿ 2 ನೇ ಹಂತದ ಮತದಾನ ಜರುಗಿತು. ಬೆಳಗ್ಗೆ 7 ಗಂಟೆಗೆ ಆರಂಭವಾದ ಮತದಾನ ಬಿರುಬಿಸಿಲು ಇರುವುದರಿಂದ ಬೆಳಗ್ಗೆಯೇ ಮತದಾರರು ತಮ್ಮ ಹಕ್ಕು ಚಲಾಯಿಸಲು ಉತ್ಸುಕರಾಗಿದ್ದರು.

ಗದಗ ಬೆಟಗೇರಿ ನಗರಸಭೆಯ ಗದಗ ಬ್ಲಾಕ ಕಾಂಗ್ರೆಸ್ ಅಧ್ಯಕ್ಷರಾದ. ಬಿ.ಬಿ.ಅಸೂಟಿ ಹಾಗೂ ನಗರಸಭೆ ಸದಸ್ಯಣಿಯಾದ . ಶ್ರೀಮತಿ.ಲಲಿತಾ. ಬ.ಅಸೂಟಿ. ವಾರ್ಡ್ ನಂ–27– ರ.